**OS 88/2018**
**PW-1**

**ದಿನಾಂಕಃ 16.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀಮತಿ.ಎಸ್ ಬಿ ಎಸ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ತಿಳಿದು ಸಹಿ ಮಾಡಿರುತ್ತೇನೆ.

ತಮ್ಮಡಿಪುರ ಗ್ರಾಮದ ಸರ್ವೆ ನಂಬರ್ 103/1 ರ ಪಹಣಿ ಪತ್ರಿಕೆಯ ಗಣಕೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-1 ಎಂದು, ದಿನಾಂಕ 09.01.2018 ರ ತಿಳುವಳಿಕೆ ನೋಟೀಸ್ ನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-2 ಎಂದು, ಸೋಮನಾಥಪುರ ಗ್ರಾಮ ಪಂಚಾಯತಿಯವರು ನೀಡಿದ ನಿವೇದನೆಯನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-3 ಎಂದು, ತಮ್ಮಡಿಪುರ ಗ್ರಾಮದ ಸ್ಮಶಾನದ ಬಾಬ್ತು ತಯಾರಿಸಿದ ಸ್ಕೆಚ್ ನ ದೃಡೀಕೃತ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-4 ಎಂದು, ದಿನಾಂಕಃ 14.02.2018 ರ ಅರ್ಜಿಯ ನಕಲನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-5 ಎಂದು, ದಿನಾಂಕಃ 09.04.2018 ರ ಪತ್ರವನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-6 ಎಂದು, ದಿನಾಂಕಃ 16.04.2018 ರ ಲೀಗಲ್ ನೋಟೀಸ್ ಕಛೇರಿ ಪ್ರತಿಯನ್ನು ಹಾಜರು ಪಡಿಸುತ್ತಿದ್ದು ಅದನ್ನು ನಿಪಿ-7 ಎಂದು, 10 ಆರ್ ಪಿ ಎ ಡಿ ರಶೀದಿಗಳನ್ನು ಹಾಜರು ಪಡಿಸುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ-8 ಎಂದು, ಒಂಬತ್ತು ಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರು ಪಡಿಸುತ್ತಿದು ಅವುಗಳನ್ನು ನಿಪಿ-9 ರಿಂದ 17 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಲಯ, ಟಿ ನರಸಿಪುರ